**ದಿನಾಂಕಃ 11.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ಅಪಘಾತವಾದ ದಿನಾಂಕದಂದು ನಾನು ಕಾರಿನಲ್ಲಿ ಹೋಗುತ್ತಿದ್ದೆ. ಸದರಿ ಕಾರನ್ನು ನಾನು ಚಾಲನೆ ಮಾಡುತ್ತಿರಲಿಲ್ಲ. ನನ್ನ ಗಂಡ ಕಾರು ಚಾಲನೆ ಮಾಡುತ್ತಿದ್ದರು. ಆ ದಿನ ನಾನು ಕಾರಿನ ಚಾಲಕನ ಪಕ್ಕದ ಆಸನಲ್ಲಿ ಕುಳಿತಿದ್ದೆನು. ಅಪಘಾತದಲ್ಲಿ ಕಾರಿನಲ್ಲಿದ್ದ ಪ್ರಯಾಣಿಕರಿಗೆ ಗಾಯಗಳು ಆಗಿದ್ದವು ಎಂದರೆ ಸರಿ. ಅಪಘಾತವಾದ ರಸ್ತೆ ನೇರ ರಸ್ತೆ ಆಗಿತ್ತು. ಆಪಾದಿತ ಕಾರು ನಮ್ಮ ಎದುರುಗಡೆಯಿಂದ ಬರುತ್ತಿತ್ತು.

ಅಪಘಾತದ ಬಗ್ಗೆ ದೂರನ್ನು ನನ್ನ ಚಿಕ್ಕಮ್ಮ ಸುಧಾ ಎಂಬುವವರು ನೀಡಿರುತ್ತಾರೆ. ಅಪಘಾತವನ್ನು ನಾನು ನೋಡಿರುತ್ತೇನೆ. ಅಪಘಾತದ ಬಗ್ಗೆ ನಾನು ದೂರನ್ನು ನೀಡಿಲ್ಲ. ಅಪಘಾತವಾದ ಸ್ಥಳವನ್ನು ನಾನು ಪೊಲೀಸರಿಗೆ ತೋರಿಸಿಲ್ಲ, ಆದರೆ ನನ್ನ ಗಂಡ ಮತ್ತು ನನ್ನ ಚಿಕ್ಕಮ್ಮ ತೋರಿಸಿರುತ್ತಾರೆ. ಅಪಘಾತವಾದ ನಂತರ ಪೊಲೀಸರು ಆಪಾದಿತ ಕಾರು ಮತ್ತು ನಮ್ಮ ಕಾರಿನ ಫೋಟೋಗಳನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ತೋರಿಸಲಾದ ಎರಡು ಫೋಟೋಗಳಲ್ಲಿ ಕಂಡುಬರುವ ಸ್ಥಳ ಅಪಘಾತವಾದ ಸ್ಥಳ ಎಂದು ಸೂಚಿಸಲಾಗಿ ಸಾಕ್ಷಿಯು ನನಗೆ ಸರಿಯಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಮತ್ತೇ ಎರಡು ಫೋಟೋಗಳ ಧೃಡಿಕೃತ ಪ್ರತಿಗಳನ್ನು ತೋರಿಸಿ ಅದರಲ್ಲಿ ಕಂಡುಬರುವ ಕಾರುಗಳು ಅಪಘಾತದಲ್ಲಿ ಭಾಗಿಯಾದ ಕಾರುಗಳು ಎಂದು ಸೂಚಿಸಲಾಗಿ ಸಾಕ್ಷಿಯು ಹೌದು ಎಂದು ನುಡಿದಿರುತ್ತಾರೆ. ಸಾಕ್ಷಿಯು ಗುರುತಿಸಿದ ಫೋಟೋಗಳ ಧೃಕಡ್ರಿತ ಪ್ರತಿಗಳನ್ನು ಒಟ್ಟಾಗಿ **ನಿ.ಆರ್ 1** ಎಂದು ಗುರುತಿಸಲಾಯಿತು. ಅಪಘಾತದಲ್ಲಿ ನಮ್ಮ ಕಾರಿನ ಮುಂಭಾಗಕ್ಕೆ ಜಖಂ ಆಗಿರುತ್ತದೆ ಎಂದರೆ ಸರಿ. ಆಪಾದಿತ ಕಾರಿನ ಎಡಭಾಗದ ಬಾಗಿಲಿನ ಮಧ್ಯಭಾಗಕ್ಕೆ ಜಖಂ ಆಗಿದೆ ಎಂದರೆ ಸರಿ. ಅಪಘಾತವಾದ ನಂತರ ಎರಡೂ

ಕಾರುಗಳನ್ನು ಪೊಲೀಸರು ಅಮಾನತ್ತುಪಡಿಸಿರುತ್ತಾರೆ ಎಂದರೆ ಸರಿ. ನಮ್ಮ ಕಾರು ಆಪಾದಿತ ಕಾರಿಗೆ ಡಿಕ್ಕಿಪಡಿಸಿರುತ್ತದೆ ಎಂದರೆ ಸರಿಯಲ್ಲ.

ನಮ್ಮ ಕಾರಿಗೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ 14.10.2024ರಂದು ನಮ್ಮ ಕಾರಿನ ವಿಮೆಯು ಚಾಲ್ತಿಯಲ್ಲಿತ್ತು. ಆ ಬಗ್ಗೆ ದಾಖಲಾತಿಯನ್ನು ಹಾಜರಪಡಿಸಿಲ್ಲ ಮತ್ತು ಹಾಜರುಪಡಿಸಲು ತೊಂದರೆ ಇಲ್ಲ. ನಮ್ಮ ಕಾರು 2014ರ ಮಾಡೆಲ್ ಆಗಿತ್ತು ಎಂದರೆ ಸರಿ. ಅಪಘಾತವಾದ ದಿನಾಂಕದಂದು ನಮ್ಮ ಕಾರಿನ ಮಾರುಕಟ್ಟೆ ಬೆಲೆ 2-2.50 ಲಕ್ಷ ಆಗಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಕಾರಿನ ವಿಮಾ ಕಂಪನಿಗೆ ಅಪಘಾತದ ಬಗ್ಗೆ ಮಾಹಿತಿ ನೀಡಿಲ್ಲ. ಕಾರನ್ನು ರಿಪೇರಿಗೆ ಬಿಡುವ ಪೂರ್ವದಲ್ಲಿ ವಿಮಾ ಮೌಲ್ಯಮಾಪಕರಿಂದ ಅಥವಾ ಇತರ ಮೌಲ್ಯಮಾಪಕರಿಂದ ವಾಹನದ ಮೌಲ್ಯಮಾಪನ ಮಾಡಿಸಿರುವುದಿಲ್ಲ. ಕಾರನ್ನು ರಿಪೇರಿ ಮಾಡಿಸುವ ಪೂರ್ವದಲ್ಲಿ ಅಂದಾಜು ಪಟ್ಟಿ ಪಡೆದಿಲ್ಲ. ನಿಪಿ 10 ರಲ್ಲಿ ಉಲ್ಲೇಖಿತ ಕಂಪನಿ ಡಸ್ಟರ್ ವಾಹನದ ಅಧಿಕೃತ ಮಾರಾಟಗಾರರು ಅಲ್ಲ ಎಂದರೆ ಸರಿ. ನಿಪಿ 10 ಅನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 10 ಕ್ಕೆ ಪೂರಕವಾದ ಸರ್ವೇ ವರದಿ ಅಥವಾ ಮೌಲ್ಯಮಾಪನ ಇಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ಆದ ಜಖಂ ಗಳೊಂದಿಗೆ ಇತರ ಹಳೆಯ ಜಖಂ ಗಳು ಸೇರಿದಂತೆ ರಿಪೇರಿ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ಆದ ಕಾರಣ ಬಿಲ್ಲಿನ ಮೊತ್ತ ಹೆಚ್ಚು ನಮೂದು ಆಗಿದೆ ಎಂದರೆ ಸರಿಯಲ್ಲ. ಕಾರಿಗೆ ಅಳವಡಿಸಲಾದ ಬಿಡಿ ಭಾಗಗಳಿಗೆ ಸವಕಳಿ ಕಳೆಯಬೇಕಾಗುತ್ತದೆ ಎಂದರೆ ಸರಿಯಲ್ಲ.

ಅಪಘಾತ ನನ್ನ ಗಂಡನ ತಪ್ಪಿ ನಿಂದ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಆಪಾದಿತ ಕಾರಿನ ಚಾಲಕನ ತಪ್ಪಿ ನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಆಪಾದಿತ ಕಾರಿನ ಮುಂಭಾಗದಲ್ಲಿ ಯಾವುದೇ ಜಖಂ ಗಳು ಕಂಡುಬರುತ್ತಿಲ್ಲ ಎಂದರೆ ಸರಿ. ನಮ್ಮ ಕಾರಿಗೆ ವಿಮೆ ಇಲ್ಲದೇ

ಇರುವುದರಿಂದ ಪರಿಹಾರ ಪಡೆಯುವ ಉದ್ದೇಶದಿಂದ ಪೊಲೀಸರೊಂದಿಗೆ ಶಾಮೀಲಾಗಿ ಆಪಾದಿತ ಕಾರಿನ ವಿರುದ್ದ ಸುಳ್ಳು ದೂರು ನೀಡಿ, ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ಪ್ರಕರಣ ದಾಖಲಿಸುವಂತೆ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**